ಆ) ಆಸ್ಪತ್ರೆಗಳ ಸಿಬ್ಬಂದಿ ಹಾಗೂ ವೈದ್ಯರುಗಳ ಸರ್ಕಾರಿ ವಸತಿಗೃಹಗಳನ್ನು ಬೇಡಿಕೆಯೊಂದಿಗೆ ಅಗತ್ಯತೆಯ ಮೇರೆಗೆ ಸೂಕ್ತ ಕಾರ್ಯಕ್ರಮ ಪಟ್ಟಿಯನ್ನು ರೂಪಿಸಿಕೊಂಡು ಬಿಡುಗಡೆಯಾಗುವ ಅನುದಾನಕ್ಕನುಗುಣವಾಗಿ ಕಾಲ ಕಾಲಕ್ಕೆ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

772(1154) ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ(ಕಿತ್ತೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬ್ರಿಟಿಷರ ವಿರುದ್ಧ ಪ್ರಪ್ರಥಮವಾಗಿ ಹೋರಾಡಿದ ವೀರರಾಣಿ ಚೆನ್ನಮ್ಮಾಜಿಯ ಕಿತ್ತೂರನ್ನು ತಾಲ್ಲೂಕು ಕೇಂದ್ರವನ್ನಾಗಿ ಪರಿಗಣಿಸಿ ಆದೇಶಿಸುವ ಕುರಿತು ಸರ್ಕಾರ ಪರಿಗಣಿಸಿದೆಯೇ :

ಆ) ಪರಿಗಣಿಸಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು: ಬೇರೆ ಬೇರೆ ಜಿಲ್ಲೆಗಳ ತಾಲ್ಲೂಕು ಕೇಂದ್ರಗಳನ್ನಾಗಿ ಗುರುತಿಸಲಿರುವ ಸ್ಥಳಗಳ್ಯಾವುವು (ವಿವರ ನೀಡುವುದು) :

ಇ) ಈ ಹಿನ್ನೆಲೆಯಲ್ಲಿ ಕಿತ್ತೂರಿಗೆ ವಿಶೇಷ ತಹಸೀಲ್ದಾರ್‌ರವರನ್ನು ನೇಮಿಸಲಾಗಿದೆಯೇ: ಹಾಗಿದ್ದಲ್ಲಿ ನೇಮಕ ಮಾಡಿ 2 ವರ್ಷ ಕಳೆದರೂ ಸಹ ಕಿತ್ತೂರನ್ನು ಸಂಪೂರ್ಣ ತಾಲ್ಲೂಕನ್ನಾಗಿ ಘೋಷಿಸದಿರಲು ಕಾರಣಗಳೇನು :

ಈ) ಕಿತ್ತೂರು ತಾಲ್ಲೂಕು ಕೇಂದ್ರವನ್ನಾಗಿ ಆದೇಶ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದ್ದರೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು: ಪ್ರಗತಿಯ ಕ್ರಮಗಳ ಕುರಿತು ವಿವರ ನೀಡುವುದು ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಹೌದು

ಈಗ ಕೇಂದ್ರ ಸರ್ಕಾರವು ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣಾ ಕಾರ್ಯವು ಪೂರ್ಣ ಗೊಳ್ಳುವವರೆಗೆ ಆಡಳಿತಾತ್ಮಕ ಘಟಕಗಳ ಸ್ಥಾನ ಎಲ್ಲೆಗಳಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂದು ನಿರ್ಬಂಧ ವಿಧಿಸಿದೆ. ಈ ನಿರ್ಬಂಧವನ್ನು ಕೇಂದ್ರ ಸರ್ಕಾರವು ಹಿಂದಕ್ಕೆ ಪಡೆದ ನಂತರ ಜಿಲ್ಲಾ ಪುನರ್ ವಿಂಗಡಣಾ ಸಮಿತಿಗಳು ತಾಲ್ಲೂಕು ರಚನೆ ಸಂಬಂಧ ನೀಡಿದ ಶಿಫಾರಸ್ಸುಗಳನ್ನು ಆಡಳಿತಾತ್ಮಕ ಚೌಕಟ್ಟಿನಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಈ) 'ಅ'ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

773(1155) ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಕಿತ್ತೂರಿನಲ್ಲಿ 110 ಕೆ.ವಿ. ವಿದ್ಯುತ್ ಸರಬರಾಜು ಕೇಂದ್ರ ಮಂಜೂರಾಗಿದ್ದು ಅದಕ್ಕೆ ನಿವೇಶನ ಕೊಡಲು ಸ್ಥಳೀಯ ಭೂ ಮಾಲೀಕರು ಒಪ್ಪಿಗೆ ನೀಡಿದ್ದರೂ ಕಾಮಗಾರಿ ಕೆಲಸ ಪ್ರಾರಂಭಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು : ಈ ಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಮುಗಿಸಲಾಗುವುದು :